**ಸಾಕ್ಷಿಯನ್ನು ದಿನಾಂಕ 24-08-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎಂ.ಡಿ.ಕೆ ವಕೀಲರಿಂದಃ**

1. ವಾದಿ–ಪ್ರತಿವಾದಿಯರು ನನಗೆ ಸುಮಾರು 10 ವರ್ಷಗಳಿಂದ ಪರಿಚಯ. ಸಾಕ್ಷಿ ಪುನಃ ವಾದಿಯ ಗಂಡ ಸತೀಶ್ ನನಗೆ ಪರಿಚಯಸ್ಥ ಎನ್ನುತ್ತಾರೆ. ಸತೀಶ್ ಏನು ಕೆಲಸ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಅವರಿಗೆ ಲಾರಿ ಇತ್ತು ಎಂದು ಗೊತ್ತಿತ್ತು, ಆದರೆ ನಿಖರವಾಗಿ ಏನು ಕೆಲಸ ಮಾಡುತ್ತಾರೆ ಎಂದು ನಾನು ಕೇಳಿರಲಿಲ್ಲ ಎನ್ನುತ್ತಾರೆ. 10 ವರ್ಷಗಳಲ್ಲಿ ಸತೀಶ್ ರವರು ಏನು ಕೆಲಸ ಮಾಡುತ್ತಾರೆ ಮತ್ತು ಅವರಿಗೆ ಆದಾಯ ಎಷ್ಟಿದೆ ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ.

2. ವಾದಿ–ಪ್ರತಿವಾದಿಯರ ನಡುವೆ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಅವರ ನಡುವೆ ವ್ಯವಹಾರ ಆಗಿಲ್ಲ ಎನ್ನುತ್ತಾರೆ. ವಾದಿಯ ಕೌಟುಂಬಿಕ ಹಿನ್ನೆಲೆ ಮತ್ತು ಆರ್ಥಿಕ ಪರಿಸ್ಥಿತಿಯ ಬಗ್ಗೆ ನನಗೆ ಗೊತ್ತಿಲ್ಲ. 2020 ನೇ ಸಾಲಿನಲ್ಲಿ ವಾದಿಯ ಗಂಡ ಚೀಟಿ ವ್ಯವಹಾರ ನಡೆಸುತ್ತಿದ್ದರು. ಚೀಟಿಯ ಕಂತು ರೂ.50 ಸಾವಿರ ಆಗಿತ್ತು ಮತ್ತು 6 ತಿಂಗಳಿಗೊಮ್ಮೆ ಕಂತು ಕಟ್ಟಬೇಕಾಗಿತ್ತು ಎಂದು ನನ್ನ ಪ್ರಮಾಣ ಪತ್ರದಲ್ಲಿ ನಾನು ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ಚೀಟಿಯ ಸದಸ್ಯರಾಗಿದ್ದರು ಮತ್ತು ವಾದಿಯ ಗಂಡನ ಸಂಬಂಧಿಕರು ಎಂದು ನಾನು ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳ ಹೆಸರು

ನನಗೆ ಗೊತ್ತಿಲ್ಲ.

3. ಪ್ರತಿವಾದಿ ವಾದಿಯ ಗಂಡನಿಂದ ಚೀಟಿ ಕಮಿಷನ್ ಹಣ ರೂ.1.20 ಲಕ್ಷ ಗಳನ್ನು ಪಡೆದುಕೊಂಡಿದ್ದರು. ಪ್ರತಿವಾದಿ ಸತೀಶ್ ರವರಿಗ 2 ಖಾಲಿ ಚೆಕ್ ಗಳನ್ನು ಯಾವಾಗ ಕೊಟ್ಟರು ಎನ್ನುವುದು ನನಗೆ ಗೊತ್ತಿಲ್ಲ. ಚೀಟಿ ಭದ್ರತೆಗೆ ಸತೀಶ್ ರವರು ಬೇರೆ ಯಾರಿಂದ ಚೆಕ್ ಪಡೆದುಕೊಂಡಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ದಿನಾಂಕ 31.12.2022 ರಂದು ಪ್ರತಿವಾದಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಾದಿಯ ಗಂಡನಿಗೆ ರೂ.50 ಸಾವಿರ ನಗದು ಹಣ ಕೊಟ್ಟರು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ಸದರಿ ಹಣವನ್ನು ನನ್ನ ಸಮಕ್ಷಮ ಕೊಟ್ಟಿಲ್ಲ. ಆ ರೀತಿ ಯಾವುದೇ ವ್ಯವಹಾರ ಆಗಿಲ್ಲದೆ ಇದ್ದರೂ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ವಾದಿಯನ್ನು ಭೇಟಿ ಮಾಡಿ ತಾನು ಕಟ್ಟಿರುವ ರೂ.3 ಲಕ್ಷ ಚೀಟಿ ಹಣವನ್ನು ಪ್ರತಿವಾದಿ ವಾಪಸ್ಸು ಕೇಳಿದರು ಮತ್ತು ರೂ.70 ಸಾವಿರ ಕಮಿಷನ್ ಹಣ ವಾದಿಗೆ ಕೊಡುವುದಾಗಿ ತಿಳಿಸಿದಾಗ ಆಕೆ ಅದಕ್ಕೆ ಒಪ್ಪದೆ ರೂ.4 ಲಕ್ಷಗಳನ್ನು ಪ್ರತಿವಾದಿ ಸಾಲ ಪಡೆದುಕೊಂಡಿದ್ದು ಅದನ್ನು ವಾಪಸ್ಸು ಕೊಡುವಂತೆ ತಿಳಿಸಿದರು ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಚೀಟಿ ಸದಸ್ಯನಾಗಿರಲಿಲ್ಲ. ಚೀಟಿ ಸದಸ್ಯರು ಯಾರ್ಯಾರು ಇದ್ದರು ಎನ್ನುವುದು ನನಗೆ ಗೊತ್ತಿಲ್ಲ.

5. ವಾದಿ–ಪ್ರತಿವಾದಿಯರ ನಡುವಿನ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲದಿದ್ದರೂ ಪ್ರತಿವಾದಿಯ ಮಾತು ಕೇಳಿ ಚೀಟಿ ವ್ಯವಹಾರಕ್ಕೆ ಅವರು ವಾದಿಯ ಗಂಡನಿಗೆ ಖಾಲಿ ಚೆಕ್ ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡ ಚೀಟಿ ವ್ಯವಹಾರ ಮಾಡುತ್ತಿರಲಿಲ್ಲ ಮತ್ತು ಅವರು ಮೃತ ಪಟ್ಟಿರುವ ಸಂಗತಿಯನ್ನು ದುರ್ಬಳಕೆ ಮಾಡಿಕೊಂಡು ನಾನು ಮತ್ತು ಪ್ರತಿವಾದಿ ಸುಳ್ಳು ಕಥೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**